**ದಿನಾಂಕಃ 14-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ-**

ನಾನು ಸಿ.ಓ.ಡಿ ಕಚೇರಿಯಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತೇನೆ. 1 ನೇ ಆರೋಪಿಯನ್ನು ನಾನು ನೋಡಿ ಗುರುತಿಸುತ್ತೇನೆ. 1 ನೇ ಆರೋಪಿ ಈಗ ನ್ಯಾಯಾಲಯದ ಮುಂದೆ ಇದ್ದಾರೆ. ಈ ಮುಂಚೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಅದನ್ನು ಹೊರುತು ಪಡಿಸಿ ಬೇರೆನು ಹೇಳಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ–**

1 ನೇ ಆರೋಪಿ ಕೊಟ್ಟಂತಹ ಚೆಕ್ಕನ್ನು ನೀವು ಎಸ್.ಬಿ.ಎಂ. ಬ್ಯಾಂಕಿಗೆ ನಿಮಗೆ ಹೇಳಿದಂತೆ ಚೆಕ್ಕಿನ ಹಿಂದೆ ಸಹಿ ಮಾಡಿ ಹಣ ಪಡೆದುಕೊಂಡು ತಂದು ವೆಂಕಟೇಶವರಿಗೆ ಕೊಟ್ಟಿರುತ್ತೇನೆ ಎಂದು ಹೇಳಿರುವುದು ಎಂದರೆ ಹೌದು ಎನ್ನುತ್ತಾರೆ. ಸಾಕ್ಷಿ ನಿಪಿ–6, 9 ಮತ್ತು 11 ರಲ್ಲಿರುವ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 6(ಎ), 9(ಎ) ಮತ್ತು 11 (ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಸ್.ಇ.ಜಿ. 1 ನೇ ಆರೋಪಿ ಪರ ವಕೀಲರಿಂದಃ–**

ಪೋಲಿಸರಿಗೆ ಯಾವಾಗ ಹೇಳಿಕೆ ಕೊಟ್ಟಿರುತ್ತೀರಿ ಎಂದರೆ ನನಗೆ ಜ್ಞಾಪಕ ಇರುವುದಿಲ್ಲ ಎನ್ನುತ್ತಾರೆ.

1 ನೇ ಆರೋಪಿ ನಿಮ್ಮ ಹತ್ತಿರ ಯಾವುದೇ ಸ್ಟೇಶನರಿ ಖರೀದಿ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸ್ಟೇಶನರಿ ಖರೀದಿ ಮಾಡಿದಾಗ ನೀವು ವೋಚರ್ ಕೊಟ್ಟಿರುತ್ತೀರಿ ಎಂದರೆ ಇಲ್ಲ ಎನ್ನುತ್ತಾರೆ. ಯಾವುದೇ ತರಹದ ಚೆಕ್ಕನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಸಂಸ್ಥೆಗೆ ಕೊಡಬೇಕಾದಂತಹ ಚೆಕ ಆದ ಕಾರಣ ಬೇರೆಯವರು ತೆಗೆದುಕೊಂಡು ಹೋದರೆ ಹಣ ಕೊಡುವುದಿಲ್ಲ ಎಂದರೆ ಸರಿಯಲ್ಲ. ಸದರಿ ನೀವು ಚೆಕ್ಕುಗಳನ್ನು ಬ್ಯಾಂಕ್ ಗಳಿಗೆ ಕೊಟ್ಟು ಯಾವುದೇ ಹಣ ತಂದಿರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಸಹಿಗಳು ಪ್ರಸ್ತುತ ಪ್ರಕರಣ ಸಲ್ಲಿಸುವ ಮೊದಲೆ ಸಹಿ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಚೆಕ್ಕುಗಳನ್ನು ಬ್ಯಾಂಕಿಗೆ ಕೊಟ್ಟಾಗ ನಿಮ್ಮ ಸಹಿ ಇರಲಿಲ್ಲ ಎಂದರೆ ಸರಿಯಲ್ಲ. ನೀವು ಹಾಗೂ 1 ನೇ ಆರೋಪಿ ಎಂದಿಗೂ ಪರಿಚಯ ಇರುವುದಿಲ್ಲ ಎಂದರೆ ಪರಿಚಯ ಇರುತ್ತಾರೆ ಎನ್ನುತ್ತಾರೆ. ನೀವು ಯಾವುದೇ ತರಹದ ಸ್ಟೇಶನರಿ ಅಂಗಡಿ ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**2 ರಿಂದ 4 ಆರೋಪಿ ಪರ ವಕೀಲರು 1 ನೇ ಆರೋಪಿ ವಕೀಲರು ಮಾಡಿದ ಪಾಟಿಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**Sd/-**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.